

# ಡೈವೋರ್ಸ್ ಟ್ಯಾಟೂ!

ಸಂಸಾರದಲ್ಲಿ ಸಾಮರಸ್ಯ ಕೆಟ್ಟು ಹೋಗಿ ವಿಚ್ಛೇದನ ಪಡೆಯುವುದು ಹೊಸತೇನಲ್ಲ. ಹಾಗೆಯೇ ಟ್ಯಾಟೂ ಹಾಕಿಸಿಕೊಳ್ಳುವುದೂ ಹಲವರಿಗೆ ಇಷ್ಟ. ಆದರೆ ವಿಚ್ಛೇದನ ಸಿಕ್ಕ ಸಂಭ್ರಮಾಚರಣೆಗೆಂದೇ ಎರಡು ಮಕ್ಕಳ ತಾಯಿಯೊಬ್ಬಳು ತನ್ನ ಮೈ ತುಂಬಾ ಹಚ್ಚೆ ಬರೆಸಿಕೊಂಡಿರುವುದು ಮಾತ್ರ ಹೊಸ ವಂಡರ್!

ಇಂಗ್ಲೆಂಡಿನ ಆಕ್ಸ್‌ಫರ್ಡ್‌ನಲ್ಲಿ ಖಾಸಗಿ ಶಾಲೆಯಲ್ಲಿ ತೋಟಗಾರಿಕೆ ಕೆಲಸದಲ್ಲಿರುವ 41 ವರ್ಷದ ಜಾಕ್ವಿ ಮೂರ್‌ಗೆ, ಗಂಡ ಮಾರ್ಟಿನ್‌ನಿಂದ 2003ರ ಮಾರ್ಚ್ ತಿಂಗಳಲ್ಲಿ ಡೈವೋರ್ಸ್ ಸಿಕ್ಕಿತು. ಅಂದಿನಿಂದ ಈಕೆ ಪ್ರತೀ ವರ್ಷ ತನ್ನ ಡೈವೋರ್ಸ್ ಸಿಕ್ಕ ದಿನವನ್ನು ಹಚ್ಚೆ ಹಾಕಿಸಿಕೊಳ್ಳುವುದರ ಮೂಲಕ ಆಚರಿಸಿಕೊಳ್ಳುತ್ತಿದ್ದಾಳೆ. ದೇಹದ ಶೇಕಡಾ 85ರಷ್ಟು ಭಾಗವನ್ನು ಟ್ಯಾಟೂನಿಂದ ಚಿತ್ರಿಸಿಕೊಂಡಿರುವ ಈಕೆಯ ಎಡ ಬಗಲು, ಬಲಗಾಲಿನ ಅರ್ಧ ಭಾಗ ಹಾಗೂ ಮುಖದ ಕೆಲ ಭಾಗವಷ್ಟೇ ಬಾಕಿ ಇದೆ!

ಮುಂದಿನ ವಸಂತದಲ್ಲಿ ಉಳಿದಿರುವ ಶೇಕಡಾ 15ರಷ್ಟು ದೇಹಭಾಗದಲ್ಲೂ ಟ್ಯಾಟೂ ಹಾಕಿಸಿಕೊಳ್ಳುವುದಾಗಿ ಈಕೆ ಹೇಳಿದ್ದಾಳೆ. ಜಾಕ್ವಿ ಮೂರ್ ಹಚ್ಚೆಗಾಗಿ ಪ್ರತಿ ಸಲ ಪಾರ್ಲರ್‌ಗೆ ಭೇಟಿಯಿತ್ತಾಗಲೂ ಈಕೆಯ ದೇಹದ ಮೇಲೆ ಚಿತ್ರ ಬಿಡಿಸಿದ ಏಕೈಕ ಟ್ಯಾಟೂ ಕಲಾವಿದ 45 ವರ್ಷದ ಕರ್ಲಿ. ಈತನೂ ತನ್ನ ಮೈ ತುಂಬಾ ಹಚ್ಚೆ ಚಿತ್ರಗಳನ್ನು ಬಿಡಿಸಿಕೊಂಡಿದ್ದಾನೆ. 'ನನ್ನ ಸ್ವಾತಂತ್ರ್ಯದ ಸಂಕೇತವಾಗಿ ಹೊಸ ಟ್ಯಾಟೂ ಹಾಕಿಸಿಕೊಳ್ಳುತ್ತೇನೆ. ಇದು ನನ್ನ ಬಾಳಿನ ಹೊಸ ಅಧ್ಯಾಯ. ಇದಕ್ಕಾಗಿ ಪಾರ್ಲರ್‌ಗೆ ಹೋದಾಗ ಕರ್ಲಿಯ ಪರಿಚಯವಾಗಿ ಆತನ ಮೇಲೆ ಪ್ರೇಮಾಂಕುರವಾಗಿದೆ. ಅವನೇ ನನಗೆ ಪ್ರತಿ ವರ್ಷ ಹಚ್ಚೆ ಬಿಡಿಸಿದ್ದಾನೆ' ಎಂದು ಜಾಕ್ವಿ ಮೂರ್ ಹೊಸ ಪ್ರೇಮಕಥೆಗೂ ಲಿಂಕ್ ಕೊಟ್ಟಿದ್ದಾಳೆ.

'ಭಲೇ ಹಚ್ಚೆ ಜೋಡಿ' ಎನ್ನುವುದರ ಜತೆಗೆ 'ಭಲೇ ಹುಚ್ಚು ಜೋಡಿ' ಎಂದೂ ಹೇಳಬಹುದೆ?



■ ವಿದ್ಯಾ ವಿ ಹಾಲಭಾವಿ